# ವಾರ್ತಾ ವಿಶ್ಲೇಷಣೆ

## ದಾನವಲ್ಲ ನ್ಯಾಯ

ಸಂಪ್ರದಾಯಸ್ಥ ಯಹೂದಿಗಳಾದ ಸ್ಯಾಮ್ ಫ್ಲೈಶೇಕರ್ (Sam Fleischaker) 'ಲಾಸ್ ಏಂಜಲಿಸ್ ಟೈಮ್ಸ್' ಪತ್ರಿಕೆಯಲ್ಲಿ ಬರೆಯುತ್ತಾರೆ : 'ಸರ್ಕಾರವು ಸಮಾಜಹಿತ ಕಾರ್ಯವನ್ನು ಧಾರ್ಮಿಕ ನಂಬಿಕೆಯನ್ನು ಆಧರಿಸಿದ ಸಂಸ್ಥೆಗಳ ಮೂಲಕ ಮಾಡಬಾರದು. ಸಮಾಜಕ್ಕೆ ಅದರಿಂದ ಪ್ರಯೋಜನವಾಗುವಂತಿದ್ದರೂ ಹಾಗೆ ಮಾಡ ಬಾರದು.' ಇಂತಹ ಸಂಸ್ಥೆಗಳು ಬಡಜನರ ಶಿಕ್ಷಣ, ಆರೋಗ್ಯ ಮುಂತಾದ ವಿಶಾಲ ವ್ಯಾಪ್ತಿಯುಳ್ಳ ಸಮಸ್ಯೆಗಳನ್ನು ಬಗೆಹರಿಸ ಲಾರವು, ಏಕೆಂದರೆ ಅವುಗಳ ಮುಖ್ಯ ಉದ್ದೇಶ ತಮ್ಮ ಧಾರ್ಮಿಕ ನಂಬಿಕೆಯನ್ನು, ತತ್ತ್ವಗಳನ್ನು ಹರಡುವುದೇ ಆಗಿರುತ್ತದೆಯೇ ಹೊರತು ಇಂಥ ಸಮಸ್ಯೆಗಳನ್ನು ಪರಿಹರಿಸುವುದಲ್ಲ—ಎಂದು ಅವರು ಅಭಿಪ್ರಾಯ ಪಡುತ್ತಾರೆ. ತಮ್ಮ ತಮ್ಮ ಧರ್ಮಾನುಯಾಯಿ ಗಳ ಸಂಖ್ಯಾವೃದ್ಧಿಯೇ ಇಂತಹ ಸಂಸ್ಥೆಗಳ ಮೂಲೋದ್ದೇಶವಾಗಿರು ತ್ತದೆ. ಅನೇಕ ಧಾರ್ಮಿಕ ಸಂಸ್ಥೆಗಳು ಉತ್ತಮ ಸಾಮಾಜಿಕ ಹಿತ ಕಾರ್ಯವನ್ನು ಮಾಡುವುದರ ಜೊತೆಗೆ ನೈತಿಕವಾಗಿ ಅಹಿತಕರವಾದ, ರಾಜಕೀಯವಾಗಿ ಅಪಾಯಕರವಾದ ಮತತತ್ತ್ವಗಳನ್ನು ಜನರಲ್ಲಿ ಪ್ರಚಾರ ಮಾಡುತ್ತವೆ ಎಂದು ಆ ಲೇಖಕರು ಹೇಳುತ್ತಾರೆ. ಅಂದರೆ ಇಂಥ ಧಾರ್ಮಿಕ ಸಂಸ್ಥೆಗಳು ಲೋಕಸಂಗ್ರಹ ಕಾರ್ಯ ಮಾಡುವುದು ತಮ್ಮ ಧರ್ಮಕ್ಕೆ 'ಲೋಕಸಂಗ್ರಹ'ಕ್ಕಾಗಿ.

ಅವರು ಇನ್ನೂ ಮುಂದುವರಿದು ಹೇಳುತ್ತಾರೆ, ಬಡವರಿಗೆ ಕೇವಲ ಕರುಣೆಯಿಂದ ಸಹಾಯ ಮಾಡುವುದು ಉಚಿತವಲ್ಲ, ಎಂದು. ಬಡತನ ಅವರ ಆಯ್ಕೆಯಲ್ಲ. ಅವರೂ ಎಲ್ಲರಂತೆ ಮೂಲ ಭೂತ ಆವಶ್ಯಕತೆಗಳಿಗೆ ಹಕ್ಕುಳ್ಳವರು. ಅವರಿಗೆ ನಾವು ಅವುಗಳನ್ನು ಒದಗಿಸಿದಾಗ ಅವರಿಂದ ನಾವು ಕೃತಜ್ಞತೆಯನ್ನು ನಿರೀಕ್ಷಿಸ ಬೇಕಾಗಿಲ್ಲ ಮತ್ತು ನಾವು ದೊಡ್ಡ ಉಪಕಾರಮಾಡಿದೆವೆಂದು ಬೆನ್ನು ತಟ್ಟಿಕೊಳ್ಳಬೇಕಾಗಿಲ್ಲ. ಸ್ವಾಮಿ ವಿವೇಕಾನಂದರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ: 'ಉಚ್ಚ ಸ್ಥಾನದಲ್ಲಿ ನಿಂತು ಕೈಯಲ್ಲಿ ಮೂರುಕಾಸನ್ನು ಹಿಡಿದುಕೊಂಡು, "ಎಲಾ ಬಡವ ಹಿಡಿ" ಎಂದು ಹೇಳದಿರಿ. ನೀವು ಆತನಿಗೆ ಸಹಾಯ ಮಾಡುವುದರಿಂದ ನಿಮಗೆ ನೀವೇ ಸಹಾಯಮಾಡಿಕೊಳ್ಳಲು ಶಕ್ತರಾದುದಕ್ಕೆ ಆ ಬಡವನಿಗೆ ಕೃತಜ್ಞರಾಗಿರಿ.'

ಶಿಕ್ಷಣ, ವೈದ್ಯಕೀಯ ಸೌಲಭ್ಯ, ಪೌಷ್ಟಿಕ ಆಹಾರ ಮುಂತಾ ದವುಗಳು ಎಲ್ಲರ ಮೂಲಭೂತ ಹಕ್ಕು, ಇವನ್ನು ಪಡೆಯುವುದಕ್ಕೆ ಎಲ್ಲರಿಗೂ ಸಮಾನ ಅವಕಾಶ ಸಮಾಜದಲ್ಲಿ ಇರಬೇಕು; ಇಂತಹ ಒಂದು ಸನ್ನಿವೇಶವನ್ನು ಕಲ್ಪಿಸಬೇಕೇ ಹೊರತು ನಿರಂತರವಾಗಿ ಬಡವರಿಗೆ ದಾನ ಮಾಡುವುದರಿಂದ ಬಡತನ ನಿವಾರಣೆಯಾಗು ವುದಿಲ್ಲ—ಇದು ಸ್ವಾಮಿ ವಿವೇಕಾನಂದರ ಅಭಿಪ್ರಾಯ ☆

## ಪುಸ್ತಕದ ಮಹಿಮೆ.

ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ (ಜ್ಞಾನಕ್ಕೆ ಸಮಾನ ಪವಿತ್ರವಾದುದು ಯಾವುದೂ ಇಲ್ಲ) ಎಂದು ಭಗವದ್ಗೀತೆ ಹೇಳುತ್ತದೆ. ಅಂಥ ಜ್ಞಾನ ಸಂಪತ್ತಿನಿಂದ ಕೂಡಿದ ಪುಸ್ತಕವನ್ನು ನಾವು ಸರಸ್ವತಿ ಎಂದು ಪೂಜಿಸುತ್ತೇವೆ. 'ಯಾವುದೇ ಹೊಸ ಆವಿಷ್ಕಾರವೂ ಕೂಡ ಪುಸ್ತಕದಷ್ಟು ಉನ್ನತ ಜೀವನವನ್ನು ನಮಗೆ ನೀಡಲಾರದು' ಎನ್ನುತ್ತಾರೆ ಡೇವಿಡ್ ಮ್ಯಾಕ್ ಕ್ಯೂಲೋ (*Readers' Digest*, January 2001).

ಆದರೆ ಪುಸ್ತಕಕ್ಕೆ ಸಲ್ಲುತ್ತಿದ್ದ ಆದರ ಈಗ ಕಡಮೆಯಾಗುತ್ತಿದೆ. ಜನರಿಗೆ ಓದುವುದಕ್ಕೆ ಸಮಯವೇ ಇಲ್ಲ. ಟಿವಿ ಮತ್ತು ಕಂಪ್ಯೂಟರ್ ಅವರ ಹೆಚ್ಚಿನ ಸಮಯವನ್ನು ಕಬಳಿಸುತ್ತಿವೆ. ಅಮೆರಿಕದಲ್ಲಿ ಜನಸಾಮಾನ್ಯರು ದಿನಕ್ಕೆ ನಾಲ್ಕು ಗಂಟೆಗಳ ಕಾಲ ಟಿವಿ ನೋಡು ತ್ತಾರಂತೆ. ಒಬ್ಬ ಸಾಮಾನ್ಯ ಓದುಗನು ನಿಮಿಷಕ್ಕೆ ೨೫೦ ಶಬ್ದಗಳನ್ನು ಓದಬಹುದಂತೆ. ಅವನು ಟಿವಿ ನೋಡುವ ಸಮಯವನ್ನು ಓದು ವುದಕ್ಕೆ ಉಪಯೋಗಿಸಿದರೆ ಒಂದು ವಾರದಲ್ಲಿ ಎಷ್ಟೋ ಗ್ರಂಥಗಳನ್ನು ಓದಿ ಮುಗಿಸಬಹುದು. ಆದರೆ ಇಷ್ಟೊಂದು ಶ್ರಮಪಡಬೇಕಲ್ಲ! ಒಂದು ಗುಂಡಿ ಒತ್ತಿದರೆ ಸಾಕು ಅನೇಕ ಮಾಹಿತಿಗಳು ದೊರೆಯುತ್ತವೆ. ಅಮೆರಿಕದ ಹಿಂದಿನ ಅಧ್ಯಕ್ಷರಾದ ಥಿಯೊಡರ್ ರೂಸ್‌ವೆಲ್ಟ್ ಒಮ್ಮೆ ೬೫ ಕಿಲೋಮೀಟರ್ ನಡೆಯಬೇಕಾದ ಸಂದರ್ಭ ಒದಗಿತಂತೆ. ಆ ಸಂದರ್ಭದಲ್ಲಿ ಅವರು 'ಆ್ಯನ್ನ ಕರೆನಿನಾ' ಎಂಬ ಬೃಹದ್ ಗ್ರಂಥ ವನ್ನು ಓದಿ ಮುಗಿಸಿದರಂತೆ.

ಮಾಹಿತಿಯೇ ಕಲಿಕೆ ಎಂಬ ಭ್ರಾಂತಿಗೆ ನಾವು ಒಳಗಾಗಿದ್ದೇವೆ. ನಿಜವಾಗಿ ಕಲಿಯುವುದೆಂದರೆ ವಿವೇಕಸಂಪನ್ನರಾಗುವುದು, ಒಳದೃಷ್ಟಿ ಯನ್ನು ಪಡೆಯುವುದು, ಮಾನವ ಸ್ವಭಾವವನ್ನು ಅರಿಯುವುದು, ನಮ್ಮನ್ನೂ ನಮ್ಮ ಸುತ್ತಲಿನ ಪ್ರಪಂಚವನ್ನೂ ಅರಿಯುವುದು. ಇವು ಪುಸ್ತಕದಿಂದ ಮಾತ್ರ ಸಾಧ್ಯ. ಟಿವಿ ಮತ್ತು ಕಂಪ್ಯೂಟರ್ ಮೂಲಕ ನಾವು ವಿಷಯಗಳನ್ನು ಕೇವಲ ಸ್ವೀಕರಿಸುವುದಷ್ಟೆ. ಅಲ್ಲಿ ವಿಚಾರಕ್ಕೆ ಅವಕಾಶವಿಲ್ಲ.

'ಜೀವನಕ್ಕಾಗಿ ಜೀವನವೆಲ್ಲ ಓದಿ' ಎಂದು ಹೇಳುತ್ತಾರೆ ಡೇವಿಡ್ ಮ್ಯಾಕ್ ಕ್ಯುಲೊ. ನಾವು ಎಲ್ಲಿಗೆ ಹೋಗುವುದಿದ್ದರೂ ಒಂದು ಪುಸ್ತಕ ವನ್ನು ತೆಗೆದುಕೊಂಡು ಹೋಗಬೇಕು ಎಂಬುದು ಹಳೆಯ ಸಲಹೆ ಯಾದರೂ ಒಳ್ಳೆಯ ಸಲಹೆ ಎನ್ನುತ್ತಾರೆ ಅವರು. 'ಜೇಬಿನಲ್ಲಿ ಒಬ್ಬ ಕವಿಯಿದ್ದರೆ ನೀವೆಂದೂ ಒಂಟಿಯಾಗಿರುವುದಿಲ್ಲ' ಎನ್ನುತ್ತಾರೆ ಜಾನ್ ಆಡಮ್ಸ್.

☆